<u>ದಿನಾಂಕಃ **06/07/2024** ರಂದು ಅಸಾಃ **1** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ</u>

ನಮ್ಮ ಜಮೀನಿನ ಸರ್ವೆ ನಂ 46 ಇರುತ್ತದೆ, ಅದು ನನ್ನ ತಂದೆ ರಮೇಶ ರವರ ಹೆಸರಿನಲ್ಲಿ 2 ಎಕರೆ ಇರುತ್ತದೆ. ತಮ್ಮಯ್ಯ ರವರು ಗೊತ್ತು, ಅವರ ಜಮೀನಿನ ಸರ್ವೆ ನಂ 8 ಇರುತ್ತದೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಅವರ ಜಮೀನು ಬರುತ್ತದೆ. ಅವರಿಗೆ ಸುಮಾರು 7-8 ಎಕರೆ ಇರುತ್ತದೆ. ನನ್ನ ಜಮೀನಿನ ಪಕ್ಕ ಸರ್ವೆ ನಂ 45 ರಲ್ಲಿ ಶಿವಣ್ಣ ರವರ ಜಮೀನಿದೆ. ತಮಯ್ಯ ರವರು ನನ್ನ ತಂದೆಯ ಮೇಲೆ ಹಾಕಿರುವ ಕೇಸಿನ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಅಸಲು ದಾವಾ 52/2020 ಪತ್ರವನ್ನು ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಒಪ್ಪುತ್ತಾರೆ, ಈ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಗಿದೆ.

2. ನಿಪಿ-1 ನನ್ನ ಬರವಣಿಗೆ ಆಗಿರುತ್ತದೆ. ಇದನ್ನು ದಿ. 04.01.2020 ರಂದು ರಾತ್ರಿ 8.00 ಗಂಟೆಗೆ ದೂರನ್ನು ಕೊಟ್ಟಿರುತ್ತೇವೆ. ದೂರು ಕೊಡಲು ನಾನು ನನ್ನ ತಂದೆ ತಾಯಿ ಹೋಗಿರುತ್ತೇವೆ. ಪೊಲೀಸರು ಹೇಳಿ ಕೊಟ್ಟ ಹಾಗೆ ದೂರನ್ನು ಬರೆದಿದ್ದೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಯಾವ ಸರ್ವೆ ನಂ ನಲ್ಲಿ ಗಲಾಟೆಯಾಗಿದೆ ಎಂಬ ವಿಚಾರ ಬರೆದಿರುತ್ತೇನೆ. ನಿಪಿ-1 ರಲ್ಲಿ ಯಾವ ಸರ್ವೆ ನಂ ನಲ್ಲಿ ಗಲಾಟೆಯಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಒಂದು ವೇಳೆ ಗಲಾಟೆಯಾಗಿದ್ದರೆ, ನಾನು ದೂರಿನಲ್ಲಿ ಸರ್ವೆ ನಂಬರ್ ಹೇಳುತ್ತಿದ್ದೆ, ಗಲಾಟೆಯಾಗದೇ ಇದ್ದುದರಿಂದ ನಾನು ಸರ್ವೆ ನಂಬರ್ ಹೇಳಿಲ್ಲ ಎಂದರೆ ಸರಿಯಲ್ಲ.

3. ನಮ್ಮ ಜಮೀನಿನಲ್ಲಿ ಮೆಣಸಿನಕಾಯಿ, ಶುಂಠಿ, ಜೋಳ ಬೆಳೆಯನ್ನು 2020 ನೇ ಇಸವಿಯಲ್ಲಿ ಬೆಳಸಿರುತ್ತೇವೆ. ಪೊಟೋದಲ್ಲಿ ಮೆಣಸಿನಕಾಯಿ ಯಾವುದೇ ಬೆಳೆ ಇಲ್ಲ ಎಂದರೆ, ಸಾಕ್ಷಿ ನಾವು ಆಗ ಹೊಲ ಊಳಿಸಿದ್ದು ಎಂದು ಹೇಳುತ್ತಾರೆ. ಪೊಟೋದಲ್ಲಿ ತಂತಿ ಬೇಲಿ ಕಾಣಿಸುತ್ತದೆ ಎಂದರೆ ಸರಿ, ತಂತಿಬೇಲಿಯಿಂದ ಆಚೆಗೆ ಕಾಡಿರುತ್ತದೆ. ತಂತಿ ಬೇಲಿ ಈಚೆಗೆ ಸರ್ವೆ ನಂಬರ್ 46 ಇರುತ್ತದೆ. ತಂತಿ ಬೇಲಿಯಿಂದ ಆಚೆಗೆ ಇರುವ ಜಮೀನು ನಮ್ಮದು, 2020 ನೇ ಸಾಲಿನಲ್ಲಿ ಅದನ್ನು ಪಾಳು ಬಿಟ್ಟಿದ್ದೆವು ಎಂದರೆ ಸರಿ. ತಂತಿ ಬೇಲಿಯಿಂದ ಈಚೆಗೆ ಇರುವ ಜಮೀನು ಸರ್ವೆ ನಂ 8 ತಮ್ಮಯ್ಯರವರದ್ದು ಎಂದರೆ ಸರಿ. ಸರ್ವೆ ನಂಬರ್ 8 ತಮ್ಮಯ್ಯ ರವರ ಹೆಸರಿನಲ್ಲಿದೆ ಎಂದರೆ, ಸಾಕ್ಷಿ ಪಹಣಿಯನ್ನು ನೋಡಿ ಇದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯನ್ನು ನಿಡಿ-2 ಎಂದು ಗುರುತಿಸಲಾಗಿದೆ.

4. ಸರ್ವೆ ನಂಬರ್ 8 ರಲ್ಲಿ ತಮ್ಮಯ್ಯ ರವರು ತೋಟ ಮಾಡಿರುತ್ತಾರೆ. ತಮ್ಮಯ್ಯ ರವರು 1 ನೇ ಆರೋಪಿ ಪೂರ್ಣೇಶ್ ರವರಿಗೆ ಮಾವನಾಗಬೇಕು. ಆ ದಿನ ನಾನು ಹೇಳಿದ ರೀತಿಯಲ್ಲಿ ಯಾವುದೇ ಗಲಾಟೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪಕ್ಕದಲ್ಲಿರುವ ನಾವು ಆರೋಪಿಯವರ ಜಮೀನನ್ನು ಒತ್ತುವರಿ ಮಾಡುತ್ತಿದ್ದೆವು, ಅದನ್ನು ಆರೋಪಿಯವರು ಕೇಳಿದಕ್ಕೆ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜಾತಿ ನಿಂದನೆ ಮಾಡಿಲ್ಲ, ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

5. ನಾನು, ನನ್ನ ತಂದೆ ತಾಯಿ ಸೇರಿ ಆಸ್ಪತ್ರೆಗೆ ಹೋದಾಗ ಸಂಜೆ 7.00 ಗಂಟೆ ಆಗಿರುತ್ತದೆ. ಮಾರನೇ ದಿನ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದಿರುತ್ತೇವೆ. ಆಸ್ಪತ್ರೆಗೆ ಕಾರಿನಲ್ಲಿ ಹೋಗಿರುತ್ತೇವೆ. ಪೊಲೀಸರವರು ದಿ. 04.01.2020 ರ ಶನಿವಾರದಂದು ಸಂಜೆ 5.30-6.00 ಗಂಟೆ ಸಮಯದಲ್ಲಿ ಪೊಟೋ ತೆಗೆದಿರುತ್ತಾರೆ. ಪೊಲೀಸರು ದಿ. 05.01.2020 ರಂದು ಸಂಜೆ 5.30-6.00 ಗಂಟೆಗೆ

ಬಂದಿರುತ್ತಾರೆ. ಬೇಲೂರು ಪೊಲೀಸರು ಮೊದಲು ಘಟನೆ ಸ್ಥಳಕ್ಕೆ ಬಂದಿರುತ್ತಾರೆ. ಆಗ ಅವರು ನಮಗೆ ಬರಲು ಹೇಳಿದ್ದರಿಂದ ನಾನು, ಗೋಪಾಲ, ಲೋಕೇಶ ಸ್ಥಳ ಮಹಜರಿಗೆ ಹೋಗಿರುತ್ತೇವೆ. ನಾನು ಅವರಿಬ್ಬರನ್ನು ಕರೆದಕೊಂಡು ಹೋಗಿರುವುದಿಲ್ಲ. ಗೋಪಾಲ ಹಾಗೂ ಲೋಕೇಶ ರವರು ಗದ್ದೆಯ ಹತ್ತಿರ ಕೆಲಸ ಮಾಡುತ್ತಿದ್ದರು ಅವರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ.

6. ಪೊಲೀಸರು ಸರ್ವೆ ನಂ 8 ರಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ. ಮಹಜರಿನಲ್ಲಿ ಪೊಲೀಸರು ಸರ್ವೆ ನಂಬರ್ 8 ಎಂದು ಬರೆದಿರುವುದಿಲ್ಲ. ನಾನು ಪೊಲೀಸರಿಗೆ ಸರ್ವೆ ನಂಬರನ್ನು ಹೇಳಿರುವುದಿಲ್ಲ. ಸರ್ವೆ ನಂ 8 ರ ಪೂರ್ವದಲ್ಲಿ ಘಟನಾ ಸ್ಥಳ ಇರುತ್ತದೆ. ಘಟನೆ ಸ್ಥಳದ ಪೂರ್ವ ಭಾಗದ ನಂತರ ರಸ್ತೆ ಇರುತ್ತದೆ. ಪಶ್ಚಿಮಕ್ಕೆ ಸರ್ವೆ ನಂ 46 ಜಮೀನು ಇರುತ್ತದೆ. ಉತ್ತರಕ್ಕೆ ನಮ್ಮದೇ ಸರ್ವೆ ನಂ 46 ರ ಖಾಲಿ ಜಾಗ ಇರುತ್ತದೆ. ದಕ್ಷಿಣಕ್ಕೆ ಸರ್ವೆ ನಂಬರ್ 8 ರ ಮರಗಳಿರುತ್ತವೆ. ಪೊಲೀಸರು ಮಹಜರ್ ಸಮಯದಲ್ಲಿ ದೊಣ್ಣೆಯನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನಾನು ಪೊಲೀಸರಿಗೆ ದೊಣ್ಣೆಯನ್ನು ತೆಗೆದುಕೊಟ್ಟಿರುತ್ತೇನೆ. ದೊಣ್ಣೆ ಸುಮಾರು 4 ಅಡಿ ಇರುತ್ತದೆ. ಅದು ಕಾಡುಜಾತಿಯ ದೊಣ್ಣೆ ಇರುತ್ತದೆ.

7. ನಾನು, ನನ್ನ ತಂದೆ-ತಾಯಿ ಅವರು ಆಸ್ಪತ್ರೆಯಲ್ಲಿ ಒಳರೋಗಿಯಾ 3 ದಿವಸ ಚಿಕಿತ್ಸೆ ಪಡೆದಿರುತ್ತೇವೆ. ಮಹಜರಿನಲ್ಲಿ ಏನು ಬರೆದಿದೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆಯಾಗಿಲ್ಲ, ಅವರ ಜಮೀನನ್ನು ಒತ್ತುವರಿ ಮಾಡುವ ಉದ್ದೇಶದಿಂದ ಅವರ ಮೇಲೆ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಜಮೀನು ಬಿಟ್ಟು ಹೋಗಲಿ ಎಂದು ಸುಳ್ಳು

ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ಆರೋಪಿಯವರು ನನ್ನಗೆ, ನನ್ನ ತಂದೆ ತಾಯಿಗೆ ಯಾವುದೇ ಜಾತಿ ನಿಂದನೆ ಮಾಡಿಲ್ಲ, ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಫೋಟೋಗೆ ನಿಲ್ಲಲ್ಲು ಹೇಳಿದ್ದರಿಂದ ನಾನು ಫೋಟೋಗೆ ನಿಂತಿರುತ್ತೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ